ವ್ಯಕ್ತಿ. ಇಲ್ಲಿನ ಹುಲಿಗಳ ಕುಲ, ಗೋತ್ರ, ಕಳ್ಳುಬಳ್ಳಿ ಸಂಬಂಧ ಎಲ್ಲಾ ಇವನಿಗೆ ಗೊತ್ತು. ಬಿಟ್ಟರೆ ಅವುಗಳ ಜೊತೆಗೇ ಬಾಳುವೆ ಮಾಡುವಷ್ಟು ಸಖ್ಯತೆ ಬೆಳೆಸಿಕೊಂಡ ಅವನ ಎಲ್ಲಾ ಮಾತಿಗೆ ಮತ್ತು ಮಾಹಿತಿಗೆ ಸುಮ್ಮನೆ ತಲೆ ಕುಣಿಸುತ್ತಿದ್ದೆವು.

ಅಷ್ಟರಲ್ಲಿ ಮುಖ್ಯ ಟಾರು ರಸ್ತೆಯ ಕಡೆಯಿಂದ ಚಿಂಕೆಗಳು ಕೂಗಿಕೊಂಡ ಸದ್ದು ಕೇಳಿತು. ಸರ್ರಕ್ಕನೆ ಅಲ್ಲಿಗೆ ಜೀಪು ದೌಡಾಯಿಸಿಕೊಂಡು ಓಡಿದೆವು. ಹುಲಿ ಇಲ್ಲೇ ಎಲ್ಲೋ ಅಡಗಿಕೊಂಡಿರುವ ಸೂಚನೆ ಸಿಗುತ್ತಿತ್ತು. ನಮ್ಮ ಬಲಭಾಗದಿಂದ ಬೇರೆ ಪ್ರಾಣಿಗಳ ಅಪಾಯದ ಕರಗಂಟೆ ಬರುತ್ತಿದ್ದ ಕಾರಣ ನಮ್ಮ ದೃಷ್ಟಿಯನ್ನು ಅತ್ತಕಡೆ ತೀವ್ರಗೊಳಿಸಿದೆವು. ಕ್ಯಾಮೆರಾ ಸಿದ್ಧ ಮಾಡಿಟ್ಟುಕೊಂಡು ಮೌನವಾದೆವು. ಪೊದೆಗಳು ಸಣ್ಣಗೆ ಅಲುಗಾಡುವುದು ಕಾಣುತ್ತಿತ್ತು. ನಾವು ನೋಡಬಯಸಿದ ಸೋನಂ ರಸ್ತೆಗೆ ಬಂದು ನಿಂತಳು.

ಆಕೆಯ ಬೆನ್ನ ಹಿಂದೆ ನಿಂತಿದ್ದ ನಮ್ಮನ್ನು ಗಮನಿಸಿ ತಿರುಗಿ ಗುರಾಯಿಸಿದಳು. ಕೇವಲ ಮೂವತ್ತು ಅಡಿಗಳ ಅಂತರದಲ್ಲಿ ನಮ್ಮ ಜೀಪು ನಿಂತಿತ್ತು. ಆಕೆಯ ಚಿತ್ರ ತೆಗೆಯುವ ವೇಳೆಗೆ ಮುಂದಿನಿಂದ ಮತ್ತೊಂದು ಜೀಪು ಬಂದಿತು. ಹುಲಿ ಎರಡು ಜೀಪುಗಳ ಮಧ್ಯೆ ಕೆಲ ಕ್ಷಣ ನಿಂತಿದ್ದು ಆಮೇಲೆ ಮೆಲ್ಲಗೆ ಪಕ್ಕಕ್ಕೆ ಸರಿಯಿತು. ಕೊನೆಗೆ ನಮ್ಮ ಜೀಪಿನ ಅತಿ ಸಮೀಪಕ್ಕೆ ಬಂದು ಕಾಡಿನೊಳಗೆ ಇಳಿಯಿತು. ಎರಡು ದಿನದಿಂದ ಸೋನಂಗೆ ಯಾವ ಬೇಟೆಯೂ ಸಿಕ್ಕಿದಂತೆ ಕಾಣುತ್ತಿಲ್ಲ. ಈಕೆ ಆಹಾರ ತೆಗೆದುಕೊಂಡು ಹೋಗಿ ಕೊಡುವ ತನಕ ಅದರ ಮಕ್ಕಳು ತಮ್ಮ ಸುರಕ್ಷಿತ ಸ್ಥಳ ಬಿಟ್ಟು ಕದಲುವುದಿಲ್ಲ. ತಾಯಿಗಾಗಿ ಎರಡು ಮೂರು ದಿನ ಅವು ಮುಗ್ಧವಾಗಿ ಕಾಯುತ್ತವೆ. ಅಳುವುದಿಲ್ಲ ಹಠ ಮಾಡುವುದಿಲ್ಲ ಎಂದು ನ್ಯಾಚುರಲಿಸ್ಟ್ ಹೇಳಿದ.

ತನ್ನ ಮರಿಗಳ ಹಸಿವೆ ಭರಿಸಲು ಹೆಣಗಾಡುತ್ತಿರುವ ಈ ತಾಯಿಯ ನೋಡಿ ಅನುಕಂಪ ಹುಟ್ಟಿತು. ಇದಕ್ಕೊಂದು ಬೇಟೆ ಈಗ ಇಲ್ಲೇ ಎಲ್ಲಾದರೂ ಸಿಗಬಾರದೆ ಎಂದು ಪಕ್ಕಾ ಸ್ವಾರ್ಥಿ ಫೋಟೋಗ್ರಾಫರ್ ಮನಸ್ಸು ಬಯಸುತ್ತಿತ್ತು. ದೂರದಲ್ಲಿದ್ದ ಕಾಡುಕೋಣಗಳ ಹಿಂಡು ಈಕೆಯ ಸುಳಿವು ಅರಿತು ಹೆದರಿ ದೂರ ಓಡಿದವು. ಲಂಗೂರ್ ಮಾತ್ರ ಎಚ್ಚರಿಕೆಯ ದನಿಯಲ್ಲಿ ಇನ್ನೂ ಕೂಗುತ್ತಲೇ ಇತ್ತು. ಅಂತೂ ಒಂದು ಪೂರ್ಣಪ್ರಮಾಣದ ಹುಲಿ ನೋಡಲು ಸಿಕ್ಕಿತೆಂದು ನಾವೆಲ್ಲಾ ಹಿಗ್ಗಿ ಹಿರೇಕಾಯಿಯಾದೆವು. ದಾರಿಯಲ್ಲಿ ಸಿಕ್ಕ ಬೇರೆಯವರಿಗೆಲ್ಲಾ ನಮಗೆ ಹುಲಿ ಸಿಕ್ಕಿತು ಎಂದು ಹೇಳಿ ಹೇಳಿ ಹೊಟ್ಟೆ ಉರಿಸಿದೆವು. ಈ ಕಿಡಿಗೇಡಿ ಕೆಲಸ ಮಾಡುವುದೆಂದರೆ ನನಗೆ ಸಖತ್ ಖುಷಿ. ಪೂನಾದಿಂದ ಬಂದಿದ್ದ ಕುಟುಂಬವೊಂದು ನೀವೇ ಅದೃಷ್ಟವಂತರು. ನಾಲ್ಕು ದಿನದಿಂದ ಕಾದರೂ ನಮಗೆ ಒಂದು ಹುಲಿಯೂ ಸಿಕ್ಕಿಲ್ಲ ಎಂದರು. ಆಗ ನಮ್ಮ ಗರ್ವಕ್ಕೆ ರೆಕ್ಕೆಪುಕ್ಕಗಳು ಮೂಡಿದವು.

